# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : 39 |
| **ಮಾನ್ಯ ಸದಸ್ಯರ ಹೆಸರು** | : ಶ್ರೀ ಛಲವಾದಿ.ಟಿ.ನಾರಾಯಣಸ್ವಾಮಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : 19-12-2022 |
| **ಉತ್ತರಿಸುವ ಸಚಿವರು** | : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ಐತಿಹಾಸಿಕ ಮುದುಗಲ್ ಕೋಟೆಯ ಶಿಥಿಲಾವಸ್ಥೆಗೆ ತಲುಪಿದ್ದು, ಕೋಟೆಯ ಜೀರ್ಣೋದ್ಧಾರ ಕೈಗೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು)</td><td rowspan="3">ಬಂದಿದೆ.<br><br>ಲಿಂಗಸಗೂರು ತಾಲ್ಲೂಕಿನಲ್ಲಿ ಮುದಗಲ್ ಪಟ್ಟಣದ ಪ್ರಾಚೀನ ಕೋಟೆಯು ಅಂದಾಜು 170 ಎಕರೆ ಪ್ರದೇಶದ ವಿಸ್ತಾರವನ್ನು ಹೊಂದಿದ್ದು, ಕೋಟೆಯ ಹೊರಭಾಗಕ್ಕೆ ಕಂದಕವನ್ನು ಹೊಂದಿದೆ. ಕೋಟೆಯ ಮುಂಭಾಗವು ಸುಸ್ಥಿತಿಯಲ್ಲಿರುತ್ತದೆ. ಇನ್ನುಳಿದಂತೆ ಕೋಟೆಯು ಅಲ್ಲಲ್ಲಿ ಶಿಥಿಲಾವಸ್ಥೆಯಲ್ಲಿದ್ದು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ವತಿಯಿಂದ ಸ್ಥಳ ಪರಿಶೀಲನೆ ಕೈಗೊಳ್ಳಲಾಗಿದೆ. ಕೋಟೆಯ ಹಾಗೂ ಕಂದಕದ ಸಮಗ್ರ ಅಭಿವೃದ್ಧಿಗಾಗಿ ರೂ.20.00ಕೋಟಿಗಳ ರೇಖಾ ಅಂದಾಜುಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ವಿಸ್ತೃತವಾದ ಯೋಜನಾ ವರದಿಯನ್ನು ಸಿದ್ಧಪಡಿಸುತ್ತಿದ್ದು, ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು, ಇವರಿಂದ ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ಸ್ವೀಕೃತಗೊಂಡ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.</td></tr>
<tr><td>ಆ)</td><td>ಈ ಕೋಟೆಯು ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ಸ್ಥಳವಾಗಿದ್ದು, ಕೋಟೆ ಸುತ್ತಲೂ ಕಂದಕಗಳು ಇದ್ದು, ಅದರಲ್ಲಿ ಪಟ್ಟಣದ ಕೊಳಚೆ ನೀರು ಶೇಖರಣೆ ಆಗಿ ಕೋಟೆಯ ಗೋಡೆಗಳು ಕುಸಿದಿದ್ದು, ಸಂಪೂರ್ಣ ಪಾಳು ಬಿದ್ದಿದ್ದು ಅವಸಾನದ ಅಂಚಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;</td></tr>
<tr><td>ಇ)</td><td>ಈ ಐತಿಹಾಸಿಕ ಕೋಟೆಯನ್ನು ಸಂರಕ್ಷಿಸಿ, ರಕ್ಷಣೆ ಮಾಡಿ ಕೋಟೆಯ ಜೀರ್ಣೋದ್ಧಾರ ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತ ಸರ್ಕಾರ ಕೈಗೊಂಡಿರುವ ಕ್ರಮವೇನು? (ಸಂಪೂರ್ಣ ವಿವರಣೆ ನೀಡುವುದು)</td></tr>
</table>

TOR 310 TDV 2022

**(ಆನಂದ್ ಸಿಂಗ್)**
ಪ್ರವಾಸೋದ್ಯಮ,
ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.